**ಕರ್ನಾಟಕ ಸರ್ಕಾರ**
**ವಾಣಿಜ್ಯ ತೆರಿಗೆ ಇಲಾಖೆ**
**2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮದ ಪ್ರಕರಣ 59ರ ಉಪ ಪ್ರಕರಣ (4)ರ ಅಡಿ**
**ವಾಣಿಜ್ಯ ತೆರಿಗೆಗಳ ಆಯುಕ್ತರು (ಕರ್ನಾಟಕ), ಬೆಂಗಳೂರು ಇವರ ನಡವಳಿಗಳು**

ವಿಷಯ: 2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮದಡಿ 'ಡೀಸೆಲ್ ಜೆನರೇಟರ್‌ಗಳ' ಮೇಲೆ ಅನ್ವಯವಾಗುವ ತೆರಿಗೆ ದರದ ಸ್ಪಷ್ಟೀಕರಣ ಕುರಿತು.

ಉಲ್ಲೇಖ: ಮೆ: ಎ.ಎಸ್. ಪವರ್ ಸೊಲ್ಯೂಷನ್ಸ್, ಬೆಂಗಳೂರು-560002. ಇವರ ಅರ್ಜಿಯ ದಿ.11-09-2013, (ಟಿನ್: 29400394291)

***

2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮದಡಿಯಲ್ಲಿ ನೋಂದಣಿದಾರರಾದ ಮೆ: ಎ.ಎಸ್. ಪವರ್ ಸೊಲ್ಯೂಷನ್ಸ್, ನಂ.1/10, ನಾಜ್ ಕಾಂಪ್ಲೆಕ್ಸ್, ಓಸ್ಮಾನ್ ಖಾನ್ ರಸ್ತೆ, ಬೆಂಗಳೂರು - 560002 ಇವರು ಮೇಲ್ಕಂಡ ಅರ್ಜಿಯಲ್ಲಿ 'ಡೀಸೆಲ್ ಜೆನರೇಟರ್‌ಗಳ' ಮೇಲೆ ಅನ್ವಯವಾಗುವ ತೆರಿಗೆ ದರದ ಸ್ಪಷ್ಟೀಕರಣವನ್ನು ಕೋರಿರುತ್ತಾರೆ.

2. 2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮದ ಪ್ರಕರಣ 59ರ ಉಪ ಪ್ರಕರಣ (4)ರ ಮೇರೆಗೆ ವಾಣಿಜ್ಯ ತೆರಿಗೆ ಆಯುಕ್ತರು (ಕರ್ನಾಟಕ),ಬೆಂಗಳೂರು ಇವರು ತೆರಿಗೆಯ ನಿರ್ಧರಣೆ ಹಾಗೂ ರಾಜಸ್ವದ ಸಂಗ್ರಹಣೆ ಕಾರ್ಯದಲ್ಲಿ ಏಕರೂಪತೆಯನ್ನು ತರುವ ಉದ್ದೇಶಕ್ಕಾಗಿ, ಸದರಿ ಅಧಿನಿಯಮದಡಿಯಲ್ಲಿ ತೆರಿಗೆಗೆ ಒಳಪಡುವ ಸರಕುಗಳ ಸಂಬಂಧದಲ್ಲಿ ಈ ಅಧಿನಿಯಮದ ಅಡಿಯಲ್ಲಿ ಸಂದಾಯ ಮಾಡತಕ್ಕ ತೆರಿಗೆ ದರವನ್ನು ಸ್ಪಷ್ಟಪಡಿಸುವುದು ಅವಶ್ಯವೆಂದು ಅಥವಾ ಯುಕ್ತವೆಂದು ಭಾವಿಸಿದರೆ ಹಾಗೆ ಮಾಡಲು ಅಧಿಕಾರ ಹೊಂದಿದ್ದಾರೆ.

ಅರ್ಜಿದಾರರು ಕೋರಿರುವ ಸ್ಪಷ್ಟೀಕರಣವು ಮೇಲೆ ನಮೂದಿಸಿದ ಉಪಬಂಧದ ವ್ಯಾಪ್ತಿಗೊಳಪಡುವುದರಿಂದ ತೆರಿಗೆ ದರದ ಬಗ್ಗೆ ಸ್ಪಷ್ಟಪಡಿಸುವುದು ಸದರಿ ಉಪಬಂಧದ ಉದ್ದೇಶ ಸಾಧನೆಗಾಗಿ ಅವಶ್ಯವೆಂದು ಮನವರಿಕೆಯಾಗಿದೆ.

3. ಈ ಹಿನ್ನೆಲೆಯಲ್ಲಿ ತೆರಿಗೆ ದರವನ್ನು ಈ ಕೆಳಕಂಡಂತೆ ಸ್ಪಷ್ಟಪಡಿಸಲಾಗಿದೆ.

**ಸ್ಪಷ್ಟೀಕರಣ ಆದೇಶ ಸಂಖ್ಯೆ:ಸಿಎಲ್‌ಆರ್/ಸಿಆರ್. 85/13-14, ದಿ. 06-03-2014**

ಡೀಸೆಲ್ ಜನರೇಟರ್‌ಗಳ ಮೇಲೆ ಅನ್ವಯಿಸುವ ತೆರಿಗೆ ದರಗಳು ಕೆಳಕಂಡಂತೆ ಇರುತ್ತವೆ ಎಂದು ಈ ಮೂಲಕ ಸ್ಪಷ್ಟೀಕರಿಸಲಾಗಿದೆ.

| ಕ್ರ.ಸಂ. | ಉತ್ಪನ್ನದ ಹೆಸರು | ತೆರಿಗೆ ದರ |
|---|---|---|
| 1 | 15 ಕೆವಿಎ ಮತ್ತು ಅದರ ಮೇಲ್ಪಟ್ಟು ಸಾಮರ್ಥ್ಯವುಳ್ಳ ಡೀಸೆಲ್ ಜೆನರೇಟರ್‌ಗಳು | (i) 2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮದ ಪ್ರಕರಣ 4(1)(ಬಿ)ರಂತೆ ದಿನಾಂಕ:01.04.2005 ರಿಂದ 04.08.2005ರವರೆಗೆ ಶೇಕಡ 12.5.<br>(ii) 2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮದ ಮೂರನೆ ಅನುಸೂಚಿಯ ಕ್ರಮ ಸಂಖ್ಯೆ 20 ನಮೂದಿನೊಡನೆ ಓದಿಕೊಂಡಂತೆ ದಿನಾಂಕ: 05.08.2005ರ ಅಧಿಸೂಚನೆ ಸಂಖ್ಯೆ: ಎಫ್‌ಡಿ 316 ಸಿಎಸ್‌ಎಲ್ 2005 (I) ರಲ್ಲಿನ ಕೋಷ್ಟಕದ ಕ್ರ.ಸಂ.35ರಂತೆ ದಿನಾಂಕ:05.08.2005 ರಿಂದ 31.03.2010ರವರೆಗೆ ಶೇಕಡ 4.<br>(iii) ದಿನಾಂಕ:01.04.2010 ರಿಂದ 31.07.2012ರವರೆಗೆ ಶೇಕಡ 5.<br>(iv) ದಿನಾಂಕ: 01.08.2012ರಿಂದ ಶೇಕಡ 5.5. |

| | | |
|---|---|---|
| **2** | 15 ಕೆವಿಎ ಗಿಂತ ಕಡಿಮೆ ಸಾಮರ್ಥ್ಯವುಳ್ಳ ಡೀಸೆಲ್ ಜೆನರೇಟರ್‌ಗಳು | (i) 2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮದ ಪ್ರಕರಣ 4(1)(ಬಿ)ರಂತೆ ದಿನಾಂಕ:01.04.2005 ರಿಂದ 31.03.2010 ರವರೆಗೆ ಶೇಕಡ 12.5.<br><br>(ii) ದಿನಾಂಕ: 31.03.2010ರ ಅಧಿಸೂಚನೆ ಸಂಖ್ಯೆ: ಎಫ್‌ಡಿ 82 ಸಿಎಸ್‌ಎಲ್ 2010(III) ರಲ್ಲಿನ ಕೋಷ್ಟಕದ ಕ್ರ.ಸಂ.13ರಂತೆ ದಿನಾಂಕ: 01.04.2010 ರಿಂದ 31.07.2012ರವರೆಗೆ ಶೇಕಡ 5.<br><br>(iii) ದಿನಾಂಕ: 31.07.2012ರ ಅಧಿಸೂಚನೆ ಸಂಖ್ಯೆ: ಎಫ್‌ಡಿ 143 ಸಿಎಸ್‌ಎಲ್ 2012(I) ರಲ್ಲಿ ತಿದ್ದುಪಡಿಯಾದಂತೆ ದಿನಾಂಕ: 31.03.2010ರ ಅಧಿಸೂಚನೆ ಸಂಖ್ಯೆ: ಎಫ್‌ಡಿ 82 ಸಿಎಸ್‌ಎಲ್ 2010(III) ರಲ್ಲಿನ ಕೋಷ್ಟಕದ ಕ್ರ.ಸಂ.13ರಂತೆ ದಿನಾಂಕ: 01.08.2012 ರಿಂದ ಶೇಕಡ 5.5. |

(ಅಜಯ್ ಸೇಠ್)
ವಾಣಿಜ್ಯ ತೆರಿಗೆಗಳ ಆಯುಕ್ತರು,
(ಕರ್ನಾಟಕ),ಬೆಂಗಳೂರು.